ಇಂದು ದಿನಾಂಕಃ 22.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ ಪಾಟೀ ಸವಾಲುಃ**</u> ಪ್ರತಿವಾದಿಯ ಪರ ಶ್ರೀ ಜಿ ಎಸ್ ಎಂ ವಕೀಲರಿಂದಃ

ದೂದಿಹಳ್ಳಿ ಗ್ರಾಮದ ಸರ್ವೇನಂ.2/3 ಆಗಿದ್ದು ಅದರ ವಿಸ್ತೀರ್ಣ ಒಟ್ಟು 28 ಗುಂಟೆ ಎಂದರೆ ಸರಿ. ಸದರಿ ಜಮೀನು 5 ಹಿಸ್ಸೆಗಳಾಗಿರುತ್ತದೆ ಎಂದರೆ ಸರಿ. ಸರ್ವೆನಂ.2/3 ಅ, 5 ಗುಂಟೆ ಜಮೀನು ಬಸನಗೌಡ ತಂದೆ ಕಲ್ಲನಗೌಡ ಹಾಗೂ 4 ಜನಕ್ಕೆ ಖಾತೆ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆನಂ.2/3 ಬ, 5 ಗುಂಟೆ ಜಮೀನು ಚನ್ನಬಸಪ್ಪ ಕಲ್ಲಪ್ಪ ಮರ್ಕಳ್ಳಿ ರವರಿಗೆ ಖಾತೆ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂ.2/3 ಕ, 6 ಗುಂಟೆ ಜಮೀನು ಗಂಗಾಧರಪ್ಪ, ಪಾಲಕ್ಷಪ್ಪ ತಂದೆ ಮಹಾದೇವಪ್ಪ ಖಂಡೇಬಾಗೂರು ರವರ ಹೆಸರಿನಲ್ಲಿ ಇದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂ.2/3 ಡ, 6 ಗುಂಟೆ ಜಮೀನು, ರಾಮನಗೌಡ, ಬಸನಗೌಡ ತಂದೆ ಕಲ್ಲನಗೌಡ ಮರ್ಕಳ್ಳಿ ಅವರ ಹೆಸರಿನಲ್ಲಿ ಇದೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂ.2/3 ಇ, ಆಸ್ತಿ 6 ಗುಂಟೆ ಜಮೀನು 1 ನೇ ಪ್ರತಿವಾದಿ ಅವರ ಸಹೋದರರಾದ ಚನ್ನಬಸಪ್ಪ ಮತ್ತು ಕಲ್ಲಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸರ್ವೇನಂ. 2/2 ಆಗಿರುತ್ತದೆ ಎಂದು ನುಡಿದಿರುತ್ತಾರೆ.

2. ಸದರಿ ಆಸ್ತಿಯ ಸಂಖ್ಯೆ 2/3 ಇ, ರ ಆಸ್ತಿಯ ಪೂರ್ವ ದಿಕ್ಕಿಗೆ ಪಿಡಬ್ಲೂಡಿ ರಸ್ತೆ ಇರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆನಂ.2/3 ಇ, 6 ಗುಂಟೆ ಕ್ಷೇತ್ರದಲ್ಲಿ ಪ್ರತಿವಾದಿ ಹಾಗೂ ಅವರ ಅಣ್ಣ ತಮ್ಮಂದಿರ ಮನೆಗಳು ಇರುತ್ತವೆ ಎಂದರೆ ಸರಿ. ಅವರ ಮನೆಗಳ ಪೂರ್ವಕ್ಕೆ ಮಾಸೂರು-ಹಿರೇಕರೊರು ರಸ್ತೆ ಇರುತ್ತದೆ ಎದಂರೆ ಸರಿ. ಅವರ ಮನೆಗಳ ದಕ್ಷಿಣಕ್ಕೆ ದೂದಿಹಳ್ಳಿ ಪಂಚಾಯತಿಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ಶೇತ್ಕಿ ಜಮೀನುಗಳು ಇರುತ್ತವೆ ಎಂದರೆ ಗೊತ್ತಿರುವುದಿಲ್ಲ. ದಕ್ಷಿಣಕ್ಕೆ ರಾಮನಗೌಡ ಕಲ್ಲನಗೌಡ ಮರ್ಕಳ್ಳಿ ರವರ ಖಾಲಿ ನಿವೇಶನ ಇರುತ್ತದ ಎಂದರೆ ಸರಿ. ಪ್ರತಿವಾದಿಯರಿಗೆ ಪಂಚಾಯತಿಯವರು ಉತಾರನ್ನು ನೀಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. 404/2 ಚಂದ್ರಪ್ಪ ಚನ್ನಬಸಪ್ಪ ಮರ್ಕಳ್ಳಿ ಅವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. 404/2/1 ಕರೆಗೌಡ್ರ ತಂದೆ ಚನ್ನಬಸಪ್ಪ ಮರ್ಕಳ್ಳಿ ರವರ ಹೆಸರಿಗೆ ಇರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. 404/1 ರ ಕಲ್ಲಪ್ಪರವರ ಹೆಸರಿನಲ್ಲಿ ಇದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಸ್ತಿ ಸಂಖ್ಯೆ 403/1, 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಆ ಬಗ್ಗೆ

ಗೊತ್ತಿರುವುದಿಲ್ಲ. ನಾನು ಹೇಳುವಂತೆ ದಾವಾದ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ವಿಲ್ ಮೂಲಕ ಬಂದಂತಹ ಆಸ್ತಿಗಳೇ ಬೇರೆ ಹಾಗೂ ದಾವೆಯಲ್ಲಿ ತೋರಿಸಿರುವ ಆಸ್ತಿಗಳೇ ಬೇರೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳು ಅಸ್ತಿತ್ವದಲ್ಲಿ ಇಲ್ಲದಿದ್ದ ಕಾರಣದಿಂದ ನಾವು ಸ್ವಾಧೀನದಲ್ಲಿ ಇರಲು ಸಾಧ್ಯವೇ ಇಲ್ಲ ಎಂದರೆ ಸರಿಯಲ್ಲ. ನಾವು ಆ ರೀತಿ ಸ್ವಾಧೀನತೆಯಲ್ಲಿ ಇಲ್ಲದೇ ಇರುವ ಕಾರಣದಿಂದ ಪ್ರತಿವಾದಿಯರು ಹರಕತ್ ಮಾಡುವ ಸಂಭವ ಉದ್ಭವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.